1	2	3
	2. ವಿದ್ಯಾವಂತ ನಿರುದ್ಯೋಗಿಗಳಿಗಾಗಿ ಕಂಪ್ಯೂಟರ್ ತರಬೇತಿಗಾಗಿ ಕಂಪ್ಯೂಟರ್ ಖರೀದಿ	61,232
	3. ಡಾ: ಅಂಬೇಡ್ಕರ್ ಜಯಂತಿ ಉತ್ಸವ ಆಚರಣೆ	7,995
	4. ಪರಿಶಿಷ್ಟ ಜಾತಿ: ಪಂಗಡಗಳ ಬಡಾವಣೆಗಳಲ್ಲಿ ಅಭಿವೃದ್ಧಿ ಕಾಮಗಾರಿ	5,74,125
	5. ಕಾಕಾ ಕಾರ್ಖಾನೀನ ಕಲ್ಯಾಣ ಮಂಟಪ ನಿವೇಶನ ಬಾಬತ್ತು ಮರು ಹೊಂದಾಣಿಕೆ ಹಾಗೂ ಬಾಕಿ ಉಳಿದ ಬಿಲ್ಲುಗಳನ್ನು ಪಾವತಿಸುವುದು	7,03,760
	6. ಸಮಾಜ ಮಂದಿರಗಳ ನಿರ್ಮಾಣ	1,14,725
	7. ಕಾಕಾ ಕಾರ್ಖಾನೀನ ಕಲ್ಯಾಣ ಮಂಟಪ ಕೆಲಸ	4,91,153
	8. ನವೋದಯ ಹಾಗೂ ಸೈನಿಕ ಶಾಲೆಗಳ ಪ್ರವೇಶಕ್ಕಾಗಿ ತರಬೇತಿ ಪಡೆಯುವ ಪರಿಶಿಷ್ಟ ಜಾತಿ: ಪಂಗಡಗಳ ವಿದ್ಯಾರ್ಥಿಗಳಿಗೆ ತರಬೇತಿ ವೆಚ್ಚ	25,000
	9. ಅತೀವೃಷ್ಟಿಯಿಂದ ಹಾನಿಗೊಳಗಾದ ಪರಿಶಿಷ್ಟ ಜಾತಿ: ಪಂಗಡಗಳ ಜನರಿಗೆ ಆರ್ಥಿಕ ಸಹಾಯ	6,000
	ಒಟ್ಟು ರೂ.	**19,93,990**

ಕಾಯ್ದಿರಿಸಿದ ಹಣ ಹಾಗೂ ವಿನಿಯೋಗಿಸಿದ ಹಣ ಶೇ. 100ರಷ್ಟು ಪ್ರಗತಿ ಸಾಧಿಸಿದೆ.

ವಿಜಾಪುರ ಹಾಗೂ ಬಾಗಲಕೋಟೆ ನೂಲಿನ ಗಿರಣಿ ಪುನರಾರಂಭಿಸುವುದು

1935 - ಶ್ರೀ ಬಸವನಗೌಡ ರಾ. ಪಾಟೀಲ್ (ಬಿಜಾಪುರ) : ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಹಾಗೂ ಬಾಗಲಕೋಟೆ ನೂಲಿನ ಗಿರಣಿಗಳನ್ನು ಪುನರಾರಂಭಿಸುವ ಬಗ್ಗೆ ಸರ್ಕಾರದ ನಿರ್ಧಾರವೇನು?

ಆ) ಪುನರಾರಂಭ ಮಾಡುವ ಉದ್ದೇಶವಿದ್ದಲ್ಲಿ ಎಂದು ಪ್ರಾರಂಭಿಸಲಾಗುವುದು, ಪುನರಾರಂಭಕ್ಕೆ ಮುಂದೆ ಆಧುನೀಕರಣಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಇ) ಹಾಲಿ ಇರುವ ತಂತ್ರಜ್ಞಾನ ಇಂದಿನ ದಿನದಲ್ಲಿ ಹೊಸ ತಂತ್ರಜ್ಞಾನ ಅವಶ್ಯಕತೆಗನುಗುಣವಾಗಿ ಬದಲಾಯಿಸಲಾಗುವುದೆ?

ಶ್ರೀ ಎಂ.ಎಸ್. ಪಾಟೀಲ್ (ಜವಳಿ ಸಚಿವರು) :

ಅ) 1995ರಲ್ಲಿ ಸರ್ಕಾರವು ಈ ಗಿರಣಿಗಳನ್ನು ಈಗಾಗಲೇ ಸಮಾಪನೆ ಮಾಡಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಹಿರೇಕೆರೂರು ಪಟ್ಟಣ ಪಂಚಾಯತಿಯಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರು

1936 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರ್) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ಪಟ್ಟಣ ಪಂಚಾಯತಿಯಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರು ಎಷ್ಟು? ಅವರುಗಳ ಹೆಸರು, ಅವರುಗಳಿಗೆ ಪ್ರತಿ ತಿಂಗಳು ಕೊಡುತ್ತಿರುವ ವೇತನ ಎಷ್ಟು?

ಆ) ಅವರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ಕೊಡುತ್ತಿರುವ ವೇತನ ಪದ್ಧತಿಯಂತೆ ವೇತನ ಕೊಡಲು ಸರ್ಕಾರವು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :

ಅ) 13

1. ಡಿ. ನಾಗರಾಜ
2. ದುರಗುಪ್ಪ ಗೊಣೆಪ್ಪ, ಬೋಗಾವಿ
3. ಭರಮಪ್ಪ ಚ. ಹರಿಜನ
4. ಕೆಂಚಪ್ಪ, ಹರಿಜನ
5. ಪರಶುರಾಮ ಹರಿಜನ
6. ನಾಗರಾಜ ಕಡಪ
7. ಸುಭಾಸ್, ಹರಿಜನ
8. ದುರುಗಪ್ಪ ಮುಗಳಿಹಳ್ಳಿ
9. ಚಂದ್ರಪ್ಪ, ಹರಿಜನ
10. ದುರುಗಪ್ಪ ಮುದಿಯಣ್ಣನವರು
11. ಜಿ.ಕೆ. ಪಾಟೀಲ
12. ಚಂದ್ರಪ್ಪ ಹ. ದಾಸನಕೊಪ್ಪ
13. ನಾಗರಾಜ ಮಾಳಿ

ಕ್ರ.ಸಂ. 1 ಮತ್ತು 2ನೇದ್ದವರಿಗೆ ಪ್ರತಿ ತಿಂಗಳು ರೂ. 900.00 ಹಾಗೂ ಕ್ರ.ಸಂ. 12 ರಿಂದ 13ರವರೆಗೆ ಪ್ರತಿ ತಿಂಗಳು ರೂ. 500.00 ರೂ.800.00 ವೇತನ ನೀಡಲಾಗುತ್ತಿದೆ.

ಆ) ಸದರಿ ನೌಕರರು ಮಂಡಲ ಪಂಚಾಯತಿಯಿಂದ ಪರಿವರ್ತಿತ ಪಟ್ಟಣ ಪಂಚಾಯತಿಗೆ ಬಂದ ನೌಕರರಾಗಿರುತ್ತಾರೆ. ಅದರ ಪ್ರಕಾರ ಸದರಿ ನೌಕರ ಮಂಡಲ ಪಂಚಾಯತಿಯಲ್ಲಿ ರೂ. 400.00ಗಳ ವೇತನ ಕೊಡುತ್ತಿದ್ದು ಪಟ್ಟಣ ಪಂಚಾಯತಿ ಆದ ಮೇಲೆ ರೂ. 800.00 ಹಾಗೂ ರೂ. 900.00 ವೇತನವನ್ನು ನೀಡಲಾಗುತ್ತಿದೆ. ಸದರಿಯವರಿಗೆ ನಿಗದಿತ ವೇತನವನ್ನು ನೀಡಲಾಗುತ್ತಿದೆ.